ನಂ. 394. ತಾರೀಖು 14ನೇ ಮಾರ್ಚ 1876.

ಫರಲೋ ರಜಾದ ಮೇಲೆ ಮೇಜರ್ ಹಿಲ್‌ಸಾಹೆಬರು ವಿಲಾಯಿತಿಗೆ ಹೋಗುವದ್ದರಿಂದ ಇದರಡಿ ಬರುವ ವರ್ಗಾವರ್ಗಿಯು ಮುಂಜಾರಾಗಿರುತ್ತೆ.

ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಶ್ನರ್ ಮೇಜರ್ ಫರಸ್‌ಸಾಹೆಬರು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗ.

ನಂ. 395. ತಾರೀಖು 15ನೇ ಮಾರ್ಚ 1876.

ಅಸಿಸ್ಟೆಂಟ್ ಕಮಿಶ್ನರ್ ಮೆಸ್ಟರ್ ಕೃಷ್ಣಿಯ್ಯನವರು ಚಿತ್ರದುರ್ಗ ಡಿಸ್ಟ್ರಿಕ್ಟು ವ ಟ್ರೆಜರಿ ಚಾರ್ಜನ್ನು ಮೇಜರ್ ಆರಂ ಸ್ಟ್ರಾಂಗ್ ಸಾಹೆಬರಿಂದ 1876ನೇ ಇಸವಿ ಮಾರ್ಚೀ 3ನೇ ಮುಕ್ತಂ ಮಧಾನ್ಹ ತ್ತರ ತೆಗದುಕ್ಕೊಂಡರು.

ನಂ. 396. ತಾರೀಖು 16ನೇ ಮಾರ್ಚೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟು ಚಾಮರಾಜಿನಗರ ವ ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಬಿದರಿನ ಮೇಲೆ ವಸೂಲಾಗುವ ಸೀನೀಯರೇಜ್ ತೀರ್ವೆಯು ಭಂಡಿ ಜೋಜೆ 1ಕ್ಕೆ $2\frac{1}{2}$ ರೂಪಾಯಿ ಇದ್ದದ್ದನ್ನು $1\frac{1}{4}$ ರೂಪಾಯಿಗೆ ಕಮ್ಮಿ ಮಾಡಲ್ಪಟ್ಟಿದೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಮಿಲಟೀರಿ.

ನಂ. 397. ತಾರೀಖು 14ನೇ ಮಾರ್ಚೀ 1876.

ಬೆಂಗಳೂರು ರೈಫಲ್ ವಾಲಂಟಿಯರ್ ಲೆಫ್ಟಿನೆಂಟ್ ಲೆನಾರ್ಡ್ ಸಾಹೆಬರಿಗೆ ಅವರು ಸ್ವಂತ ಕೆಲಸದ ಮೇಲೆ ಹೋಗತಕ್ಕ ಬ ಗ್ಯೆ ಸನ 1876ನೇ ಇಸವಿ ಜನವರೀ 15ನೇ ಮುಕ್ತಂ ಲಾಗಾಯಿತು 2 ವರುಷಗಳ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕ್ಸ್.

ನಂ. 127. ತಾರೀಖು 13ನೇ ಮಾರ್ಚೀ 1876.

ಮೈಸೂರು ವ ಕೊಡಗು ಚೀಫ್ ಇಂಜಿನೀಯರ್ ಮತ್ತು ಚೀಫ್ ಕಮ್ಮಿಶನರವರ ಪಬ್ಲಿಕ್ವರ್ಕ್ಸ್ ಇಲಾಖ ಸಿಕ್ರಿಟೇರಿ ಕರ್ನಲ್ ಸ್ಯಾಂಕಿ ಸಾಹೆಬರಿಗೆ ಮಾಹೇ ಮಜಕೂರ್ 14ನೇ ಮುಕ್ತಂ ಲಾಗಾಯಿತು 5 ದಿನಗಳ ಸಬ್‌ಸಿಡಿಯೇರಿ ರಜಾ ಕೊಡಲ್ಪಟ್ಟಿರುತ್ತೆ.

R. H. SANKEY, *Lieut.-Col., R. E.,*
Secretary, P. W. D.